

# ಮುಳುಗೇಳುವ ಚರ್ಚ್

ಹಾಸನದಿಂದ 22 ಕಿ.ಮೀ. ದೂರದಲ್ಲಿದೆ ಶೆಟ್ಟಿಹಳ್ಳಿ. ಇಲ್ಲಿ 1860 ರಲ್ಲಿ ಕಟ್ಟಲ್ಪಟ್ಟ ಚರ್ಚ್ ಇದೀಗ 155 ವರ್ಷ ಪೂರೈಸಿದ್ದು, ಇದೀಗ ತನ್ನ ಕೊನೆಯ ದಿನಗಳನ್ನು ಎಣಿಸುತ್ತಿದೆ. ಕಾರಣ 1976 ರಲ್ಲಿ ಗೊರೂರಿನಲ್ಲಿ ಹೇಮಾವತಿ ನದಿಗೆ ಅಣೆಕಟ್ಟು ಕಟ್ಟಲಾಗಿದೆ. ಮಳೆ ಹೆಚ್ಚಾಗಿ ನೀರು ಹೆಚ್ಚು ಶೇಖರಣೆಗೊಂಡಾಗ ಚರ್ಚ್‌ನ ಮುಕ್ಕಾಲು ಭಾಗ ನೀರಿನಲ್ಲಿ ಮುಳುಗುತ್ತದೆ. ನೀರು ಕಡಿಮೆಯಾದಾಗ ಮಾತ್ರ ಕಾಣಿಸುತ್ತದೆ. ಕೆಲವರು ಆಗ ಚರ್ಚ್‌ಗೆ ಭೇಟಿ ನೀಡುತ್ತಾರೆ. ಸುಂದರವಾದ ಪೇಂಟಿಂಗ್, ಭೂತಾಕಾರದ ಗೋಡೆಗಳು ಪ್ರವಾಸಿಗರನ್ನು ಆಕರ್ಷಿಸುತ್ತವೆ. ಚರ್ಚ್‌ನ ಜೀರ್ಣಾವಸ್ಥೆ ನೋಡುಗರ ಮನ ಕರಗಿಸುವಂತಿದೆ.

**-ಬಿ.ಎಸ್. ರಾಜಲಕ್ಷ್ಮಿ, ಹಾಸನ**

# ‘ಮಣ್ಣಿ’ ಬಟ್ಟಲು

ದಶಕಗಳ ಹಿಂದೆ ಕರಾವಳಿಯ ಜೈನ ಮನೆತನದವರು ಶಿಶುಗಳಿಗೆ ಮಣ್ಣಿ ಎಂಬ ಆಹಾರ ತಯಾರಿಸಲು ಬಳಸುತ್ತಿದ್ದ ಪರಂಪರೆಯಿಂದ ಬಂದ ಹಿತ್ತಾಳೆಯ ಬಟ್ಟಲು ಇದು. ಇದರಲ್ಲಿ ಹಾಲು, ಬೆಲ್ಲದೊಂದಿಗೆ ಯಾವುದಾದರೂ ಪೌಷ್ಟಿಕ ಧಾನ್ಯದ ಹುಡಿಯನ್ನು ಹಾಕಿ ಕಾಯಿಸಿ ಆರಿಸಿದ ಮೇಲೆ ತಿನ್ನಿಸಲಾಗುತ್ತಿತ್ತು. ಆಧುನಿಕ ಉಪಕರಣಗಳು ಬಂದ ಬಳಿಕ ಅಟ್ಟದ ಮೂಲೆ ಸೇರಿರುವ ನೂರಾ ಐವತ್ತು ವರ್ಷಗಳ ಹಿಂದಿನ ಬಟ್ಟಲು ಇನ್ನೂ ಬೆಳ್ತಂಗಡಿಯ ನಡ ಗುತ್ತಿನ ಅಜ್ರಿಯವರ ಮನೆಯಲ್ಲಿ ಉಳಿದುಕೊಂಡಿದೆ.

**ಪ. ರಾಮಕೃಷ್ಣ ಶಾಸ್ತ್ರಿ, ಬೆಳ್ತಂಗಡಿ**





# ಸಂಭ್ರಮದ ಹುಟ್ಟುಹಬ್ಬ

ದೇವಾಭಿಷಕ್ತನಾದ ಪ್ರಭು ಏಸುಕ್ರಿಸ್ತನ ಜನ್ಮದಿನವನ್ನು ಪ್ರಪಂಚದ ಎಲ್ಲೆಡೆ ಕ್ರಿಸ್‌ಮಸ್ ಎಂಬುದಾಗಿ ಸಂಭ್ರಮದಿಂದ ಆಚರಿಸಲಾಗುತ್ತದೆ. ಡಿಸೆಂಬರ್ ತಿಂಗಳ ಕೊರೆಯುವ ಚಳಿಯಲ್ಲಿಯೂ ತೆರೆದ ವಾಹನದಲ್ಲಿ ಉತ್ಸಾಹಿ ತರುಣರ ಜತೆಗೆ ಕ್ರಿಸ್‌ಮಸ್ ಪಪ್ಪ ಅಥವಾ ಕ್ರಿಸ್‌ಮಸ್ ಅಪ್ಪುಪ್ಪನ್ ಎಂದು ಪ್ರೀತಿಯಿಂದ ಕರೆಯಲ್ಪಡುವ ಸಾಂತಾಕ್ಲಾಸ್ ವೇಷ ಧರಿಸಿದ ಭಕ್ತನೋರ್ವನು ಬ್ಯಾಂಡ್ ಬಾರಿಸುತ್ತಾ ಹ್ಯಾಪಿ ಕ್ರಿಸ್‌ಮಸ್, ಮೆರ್‍ರಿ ಕ್ರಿಸ್‌ಮಸ್, ಅಲೆಲೂಯ ಎಂಬುದಾಗಿ ಕ್ರಿಸ್‌ಮಸ್ ಹಬ್ಬದ ಕೀರ್ತನೆಗಳನ್ನು ಹಾಡುತ್ತಾ ಸ್ವಜಾತಿ ಬಾಂಧವರ ಮನೆಗಳಿಗೆ ಭೇಟಿ ನೀಡುತ್ತಾನೆ.

ಮನೆಯನ್ನು ಪ್ರವೇಶಿಸಿ ‘ಉಣ್ಣಿ ಏಸು’ವಿನ ವಿಗ್ರಹವನ್ನು ಇರಿಸಿ ಕ್ಯಾಂಡಲ್ ಇರಿಸಿ ಪ್ರಾರ್ಥನೆ ಸಲ್ಲಿಸುತ್ತಾರೆ. ಮನೆಯವರು ನೀಡುವ ಹರಕೆಗಳನ್ನು ಸ್ವೀಕರಿಸಿ ಉಪಹಾರವನ್ನು ಮಾಡಿ ಮನೆಯವರಿಗೆಲ್ಲ ಶುಭ ಹಾರೈಸುತ್ತಾ ಹರ್ಷಗೀತೆಗಳನ್ನು ಹಾಡುತ್ತಾ ವಾಹನವನ್ನೇರಿ ಮುಂದಿನ ಮನೆಗೆ ತೆರಳುತ್ತಾರೆ.

ನೀರವರಾತ್ರಿಯಲ್ಲಿ ರೋಮಾಂಚನಗೊಳಿಸುವ ಈ ಹರ್ಷಯಾತ್ರೆ ಮುಂದಿನ ಕ್ರಿಸ್‌ಮಸ್ ಹಬ್ಬ ಎಂದು ಬರುವುದೋ ಎಂದು ಕಾತರದಿಂದ ಕಾಯುವಂತೆ ಮಾಡುತ್ತದೆ.

**-ಡಾ.ವೇಣುಗೋಪಾಲ ಶರ್ಮಾ, ಗುರುವಾಯನಕೆರೆ**